KACN320022692022

Presented on : 11-07-2022
Registered on : 11-07-2022
Decided on : 30-06-2026
Duration : 3 years, 11 months, 19 days

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕೊಳ್ಳೇಗಾಲ.**

**ದಿನಾಂಕಃ 30 ನೇ ಜೂನ್ 2026**

**: ಉಪಸ್ಥಿತರು :**

ಶ್ರೀಮತಿ. ಕಾವ್ಯಶ್ರೀ ಎಂ. ಬಿ.ಎ., ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

**ಸಿ.ಸಿ.ನಂ.1227/2022**

**ಪಿರ್ಯಾದಿಃ** ಸಿದ್ದಯ್ಯ ಬಿನ್ ಲೇಟ್ ಶ್ರೀ ಗವಿಯ,
ವಯಸ್ಸುಃ ಸುಮಾರು 56 ವರ್ಷಗಳು,
**ವಾಸಃ** ಕಾಮಗೆರೆ ಗ್ರಾಮ,
ಕೊಳ್ಳೇಗಾಲ ತಾಲ್ಲೂಕು,
ಚಾಮರಾಜನಗರ ಜಿಲ್ಲೆ.
**(ಪಿರ್ಯಾದಿ ಪರ ಶ್ರೀ ಎಸ್.ಆರ್.ಎ.,ವಕೀಲರು)**

**- ವಿರುದ್ಧ -**

**ಆರೋಪಿಃ** ಎನ್. ರಂಗರಾಜು ಬಿನ್ ಲೇಟ್ ನಾರಾಯಣಶೆಟ್ಟಿ,
ವಯಸ್ಸುಃ ಸುಮಾರು 42 ವರ್ಷ,
ವಾಸಃ ಆರ್.ಎಸ್.ದೊಡ್ಡಿ ಗ್ರಾಮ,
ಹನೂರು ಪಟ್ಟಣ, ಹನೂರು ತಾಲ್ಲೂಕು,
ಚಾಮರಾಜನಗರ ಜಿಲ್ಲೆ.
**(ಆರೋಪಿ ಪರ ಶ್ರೀ ಎಂ ಮಹದೇವಸ್ವಾಮಿ., ವಕೀಲರು)**

## ತೀರ್ಪು

ಪಿರ್ಯಾದಿಯು, ಲಿಖಿತ ವರ್ಗಾವಣೆಯ ಅಧಿನಿಯಮ 1881 ಕಲಂ 138 ರಡಿಯಲ್ಲಿ ಅಪರಾಧ ಎಸಗಿರುವುದಾಗಿ ಆರೋಪಿತನ ವಿರುದ್ಧ ಪಿರ್ಯಾದಿಯು ದಂಡ ಪ್ರಕ್ರಿಯಾ ಸಂಹಿತೆ ಕಲಂ 200 ರಡಿಯಲ್ಲಿ ಖಾಸಗಿ ಪಿರ್ಯಾದನ್ನು ಸಲ್ಲಿಸಿರುತ್ತಾರೆ.

2. **ಪಿರ್ಯಾದಿಯ ಪಿರ್ಯಾದಿನ ಸಾರಾಂಶವೇನೆಂದರೆಃ-** ಪಿರ್ಯಾದಿಯು ತನ್ನ ಪಿರ್ಯಾದಿನಲ್ಲಿ, ಆರೋಪಿಯು ಪಿರ್ಯಾದುದಾರರನ್ನು ಮನೆಯಲ್ಲಿ ದಿನಾಂಕಃ 08.01.2022 ರಂದು ಭೇಟಿ ಮಾಡಿ ರೂ. 9,50,000/-(ಒಂಭತ್ತು ಲಕ್ಷದ ಐವತ್ತು ಸಾವಿರ ರೂಪಾಯಿ) ಗಳನ್ನು ನೀಡುವಂತೆ ಕೋರಿದ್ದು, ಆರೋಪಿಯ ಕೋರಿಕೆ ಮೇರೆಗೆ ಪಿರ್ಯಾದುದಾರರು ಆರೋಪಿಗೆ ದಿನಾಂಕಃ ರೂ.9,50,000/-(ಒಂಭತ್ತು ಲಕ್ಷದ ಐವತ್ತು ಸಾವಿರ ರೂಪಾಯಿ) ಹಣವನ್ನು ಸಾಲವಾಗಿ ನೀಡಿರುತ್ತಾರೆ. ಆರೋಪಿಯು ತಾನು ಪಡೆದ ಸಾಲವನ್ನು ಎರಡು ತಿಂಗಳ ಒಳಗಾಗಿ ನೀಡುವಂತೆ ತಿಳಿಸಿ ಪಿರ್ಯಾದುದಾರರಿಂದ ಹಣವನ್ನು ಪಡೆದುಕೊಂಡಿದ್ದು, ಸದರಿ ಹಣವನ್ನು ಆರೋಪಿಯು ಎರಡು ತಿಂಗಳ ಒಳಗಾಗಿ ಹಣವನ್ನು ಪಾವತಿಸಿರುವುದಿಲ್ಲ. ಪಿರ್ಯಾದಿಯು ದಿನಾಂಕಃ 10.03.2022 ರಂದು ಆರೋಪಿಯನ್ನು ಭೇಟಿ ಮಾಡಿ ಹಣವನ್ನು ಹಿಂದಿರುಗಿಸುವಂತೆ ಕೇಳಿದಾಗ, ಆರೋಪಿ ತಾನು ಪಡೆದ ಸಾಲದ ಹಣದ ಮರುಪಾವತಿಗಾಗಿ ಪಿರ್ಯಾದಿದಾರರಿಗೆ ತಮ್ಮ ಖಾತೆಯಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹನೂರು ಶಾಖೆಯ ಚೆಕ್ ನಂ.103938ನ್ನು ರೂ.9,50,000/- ದಿನಾಂಕಃ16.05.2022 ಎಂಬುದಾಗಿ ನಮುದಾಗಿದ್ದ ಚೆಕ್ಕನ್ನು ನೀಡಿ ನಗಧೀಕರಿಸಿಕೊಳ್ಳುವಂತೆ ತಿಳಿಸಿರುತ್ತಾರೆ. ಆರೋಪಿತನು ತಿಳಿಸಿದಂತೆ, ಪಿರ್ಯಾದುದಾರರು ದಿನಾಂಕ 16.05.2022 ರಂದು ತಮ್ಮ ಖಾತೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕಾಮಗೆರೆ ಶಾಖೆಗೆ ನಗದೀಕರಣಕ್ಕಾಗಿ ಸಲ್ಲಿಸಿದಾಗ, ದಿನಾಂಕಃ 23.05.2022 ರಂದು **"Funds Insufficient "** ಎಂಬ ಹಿಂಬರಹದೊಂದಿಗೆ ಚೆಕ್ಕ್ ಅಮಾನ್ಯಗೊಂಡಿರುತ್ತದೆ. ಆ ನಂತರ ಪಿರ್ಯಾದಿಯು ಆರೋಪಿಯನ್ನು ಭೇಟಿ ಮಾಡಿ ಚೆಕ್ ಅಮಾನ್ಯಗೊಂಡಿರುವ ವಿಷಯವನ್ನು ತಿಳಿಸಲು ಮುಂದಾಗಿದ್ದು, ಪಿರ್ಯಾದುದಾರರಿಗೆ ಆರೋಪಿಯು ಸದರಿ ವೇಳೆಯಲ್ಲಿ ನೇರವಾಗಿ ಭೇಟಿಯಾಗಿರುವುದಿಲ್ಲ. ದಿನಾಂಕಃ 28.05.2022 ರಂದು ತಮ್ಮ ವಕೀಲರ ಮೂಲಕ ನೊಂದಾಯಿತ ಅಂಚೆ ಮುಖಾಂತರ ನೋಟಿಸು ನೀಡಿದ್ದು, ಸದರಿ ನೋಟಿಸ್ ದಿನಾಂಕಃ

03.06.2022 ರಂದು ಆರೋಪಿತನಿಗೆ ಖುದ್ದು ಜಾರಿಯಾಗಿರುತ್ತದೆ. ಆದರೆ, ಹಣವನ್ನು ಮರು ಪಾವತಿಸಿರುವುದಿಲ್ಲ. ಆದ್ದರಿಂದ, ಆರೋಪಿತನ ವಿರುದ್ದ ಲಿಖಿತ ವರ್ಗಾವಣೆಗಳ ಅಧಿನಿಯಮ ಕಲಂ 138 ಖಾಸಗಿ ಪಿರ್ಯಾದನ್ನು ಸಲ್ಲಿಸಿರುತ್ತಾರೆ. ಆ ನಂತರ ಈ ನ್ಯಾಯಾಲಯವು ದಿನಾಂಕಃ 06.07.2022 ರಂದು ಲಿಖಿತ ವರ್ಗಾವಣೆಗಳ ಅಧಿನಿಯಮದ ಕಲಂ 138ರಡಿಯಲ್ಲಿನ ಆರೋಪಕ್ಕೆ ಸಂಬಂಧಿಸಿದಂತೆ ಸಂಜ್ಞೇಯತೆಯನ್ನು ತೆಗೆದುಕೊಂಡು ಆರೋಪಿತನಿಗೆ ಸಮನ್ಸ್ ಜಾರಿ ಮಾಡಲಾಗಿರುತ್ತದೆ.

3. ನ್ಯಾಯಾಲಯದ ಸಮನ್ಸ್ ಪಡೆದ ಆರೋಪಿತನು ನ್ಯಾಯಾಲಯದ ಸಮಕ್ಷಮ ಹಾಜರಾಗಿ, ಜಾಮೀನು ಪಡೆದುಕೊಂಡಿರುತ್ತಾರೆ. ಆ ನಂತರ ದಿನಾಂಕಃ 25.10.2025 ರಂದು ಆಪಾಧನೆಯನ್ನು ರಚಿಸಿ, ಓದಿ ಹೇಳಲಾಗಿ ತಾನು ಯಾವುದೇ ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕೆಂದು ಹೇಳಿರುತ್ತಾರೆ. ಪಿರ್ಯಾದಿಯ ಶಪಥ ಪ್ರಮಾಣ ಪತ್ರವನ್ನು ಮುಖ್ಯವಿಚಾರಣೆ ಎಂಬುದಾಗಿ ಹಾಗೂ ದಾಖಲಾತಿಗಳನ್ನು ಮುಖ್ಯ ವಿಚಾರಣೆಯಲ್ಲಿ ನಿಶಾನಿಸಲಾದ ದಾಖಲಾತಿಗಳು ಎಂಬುದಾಗಿ ಪರಿಗಣಿಸಲಾಗಿರುತ್ತದೆ.

4. ಆರೋಪಿತನ ವಿರುದ್ಧ ಸಾಕ್ಷ್ಯ ಕಂಡುಬಂದ ಕಾರಣ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಹೇಳಿಕೆಯನ್ನು ದಾಖಲಿಸಲಾಗಿರುತ್ತದೆ. ಆರೋಪಿತನು ತನ್ನ ಮೇಲಿನ ಸಾಕ್ಷ್ಯವನ್ನು ಸುಳ್ಳು ಎಂದು ಅಲ್ಲಗಳೆದಿರುತ್ತಾರೆ. ತಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆ ಎಂಬುದಾಗಿ ತಿಳಿಸಿರುತ್ತಾರೆ ಹೊರತು ಯಾವುದೇ ಸಾಕ್ಷ್ಯ ವಿಚಾರಣೆ ಮಾಡಿರುವುದಿಲ್ಲ.

5. ಪಿರ್ಯಾದಿ ಪರ ವಾದವನ್ನು ಆಲಿಸಲಾಯಿತು. ಆರೋಪಿಗೆ ತಮ್ಮ ಪರವಾದ ವಾದವನ್ನು ಮಂಡಿಸಲು ಸಾಕಷ್ಟು ಕಾಲಾವಕಾಶ ನೀಡಿದ ನಂತರವೂ ಸಹ ತಮ್ಮ ವಾದವನ್ನು ಮಂಡಿಸಿರುವುದಿಲ್ಲ. ಹಾಗಾಗಿ, ನ್ಯಾಯಾಲಯವು ಆರೋಪಿಗೆ ತಮ್ಮ ಲಿಖಿತ ವಾದವನ್ನು ಸಲ್ಲಿಸಿಕೊಳ್ಳಲು ಅವಕಾಶ ನೀಡಿದ ನಂತರವೂ ಸಹ ತಮ್ಮ ಲಿಖಿತ ವಾದವನ್ನು ಸಲ್ಲಿಸಿಕೊಂಡಿರುವುದಿಲ್ಲ. ಪ್ರಕರಣದ ವಸ್ತುಸ್ಥಿತಿ ಹಾಗೂ ಸಾಕ್ಷಧಾರಗಳನ್ನು ಪರಿಶೀಲಿಸಿದ ನಂತರ ನ್ಯಾಯಾಲಯದ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

-: **<u>ಅಂಶಗಳು</u>** :-

**<u>ಅಂಶ-1</u>:-ಆರೋಪಿಯಾದ ನೀವು ಪಿರ್ಯಾದುದಾರರಿಂದ ಪಡೆದುಕೊಂಡ ಸೂಕ್ತ ಸಾಲದ ಮರುಪಾವತಿ ಮಾಡುವ ಸಲುವಾಗಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹನೂರು ಶಾಖೆಯ ಚೆಕ್ ನಂ.103938 ರೂ.9,50,000/- ದಿನಾಂಕಃ 16.05.2022 ಎಂಬುದಾಗಿ ನಮುದಾಗಿದ್ದ ಚೆಕ್ಕನ್ನು ನಗಧೀಕರಿಸಿಕೊಳ್ಳುವಂತೆ ನೀಡಿರುತ್ತಾರೆ. ಅದರಂತೆ, ದಿನಾಂಕ 16.05.2022 ರಂದು ಪಿರ್ಯಾದುದಾರರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕಾಮಗೆರೆ ಶಾಖೆಗೆ ನಗದೀಕರಣಕ್ಕಾಗಿ ಸಲ್ಲಿಸಿದಾಗ, ಸದರಿಯವರು ದಿನಾಂಕಃ 23.05.2022 ರಂದು "Funds Insufficient" ಎಂಬ ಹಿಂಬರಹವನ್ನು ನೀಡಿರುತ್ತಾರೆ. ಆ ನಂತರ ದಿನಾಂಕಃ 28.05.2022ರಂದು ತಮ್ಮ ವಕೀಲರ ಮೂಲಕ ನೊಂದಾಯಿತ ಅಂಚೆ ಮುಖಾಂತರ ನೋಟಿಸು ನೀಡಿದ್ದು, ಸದರಿ ನೋಟಿಸ್ಸನ್ನು ದಿನಾಂಕಃ 03.06.2022 ರಂದು ಆರೋಪಿತನು ಪಡೆದುಕೊಂಡಿದ್ದು, ಆ ನಂತರವೂ ಸಹ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಆ ಮೂಲಕ ಆರೋಪಿಯು ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಲಂ.138 ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದಾಗಿ ಪಿರ್ಯಾದುದಾರರು ರುಜುವಾತುಪಡಿಸುವವರೇ?**

**<u>ಅಂಶ-2</u>:- ಯಾವ ಆದೇಶ ?**

**6.** ಮೇಲಿನ ಅಂಶಗಳಿಗೆ ನಾನು ಕೆಳಗೆ ನೀಡಿರುವ ಕಾರಣಗಳಿಂದಾಗಿ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ-1 : ಸಕರಾತ್ಮಕವಾಗಿ

ಅಂಶ-2 : ಈ ಕೆಳಕಂಡ ಕಾರಣಗಳಿಗಾಗಿ,

: **<u>ಕಾರಣಗಳು</u>** :

7. **<u>ಅಂಶ-1 :</u>**- ಪಿರ್ಯಾದಿಯು ತನ್ನ ಪಿರ್ಯಾದಿನಲ್ಲಿ, ಆರೋಪಿತನು ಪರಸ್ಪರ ಪರಿಚಯಸ್ಥರಾಗಿರುತ್ತಾರೆ. ಪಿರ್ಯಾದುದಾರರು ಆರೋಪಿಗೆ ದಿನಾಂಕಃ ರೂ.9,50,000/-(ಒಂಭತ್ತು ಲಕ್ಷದ ಐವತ್ತು ಸಾವಿರ ರೂಪಾಯಿ) ಹಣವನ್ನು ಸಾಲವಾಗಿ ನೀಡಿರುತ್ತಾರೆ. ಆರೋಪಿ ತಾನು ಪಡೆದ ಸಾಲದ ಹಣದ ಮರುಪಾವತಿಗಾಗಿ ಪಿರ್ಯಾದಿದಾರರಿಗೆ ತಮ್ಮ ಖಾತೆಯಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹನೂರು

ಶಾಖೆಯ ಚೆಕ್ ನಂ.103938ನ್ನು ರೂ.9,50,000/- ದಿನಾಂಕಃ16.05.2022 ಎಂಬುದಾಗಿ ನಮುದಾಗಿದ್ದ ಚೆಕ್ಕನ್ನು ನೀಡಿ ನಗಧೀಕರಿಸಿಕೊಳ್ಳುವಂತೆ ತಿಳಿಸಿರುತ್ತಾರೆ. ಆರೋಪಿತನು ತಿಳಿಸಿದಂತೆ, ಪಿರ್ಯಾದುದಾರರು ದಿನಾಂಕ 16.05.2022 ರಂದು ತಮ್ಮ ಖಾತೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕಾಮಗೆರೆ ಶಾಖೆಗೆ ನಗದೀಕರಣಕ್ಕಾಗಿ ಸಲ್ಲಿಸಿದಾಗ, ದಿನಾಂಕಃ 23.05.2022 ರಂದು **"Funds Insufficient "** ಎಂಬ ಹಿಂಬರಹದೊಂದಿಗೆ ಚೆಕ್ಕ್ ಅಮಾನ್ಯಗೊಂಡಿರುತ್ತದೆ. ಆ ನಂತರ ಪಿರ್ಯಾದಿಯು ಆರೋಪಿಯನ್ನು ಭೇಟಿ ಮಾಡಿ ಚೆಕ್ ಅಮಾನ್ಯ ಗೊಂಡಿರುವ ವಿಷಯವನ್ನು ತಿಳಿಸಲು ಮುಂದಾಗಿದ್ದು, ಪಿರ್ಯಾದುದಾರರಿಗೆ ಆರೋಪಿಯು ಸದರಿ ವೇಳೆಯಲ್ಲಿ ನೇರವಾಗಿ ಭೇಟಿಯಾಗಿರುವುದಿಲ್ಲ. ದಿನಾಂಕಃ 28.05.2022 ರಂದು ತಮ್ಮ ವಕೀಲರ ಮೂಲಕ ನೊಂದಾಯಿತ ಅಂಚೆ ಮುಖಾಂತರ ನೋಟಿಸು ನೀಡಿದ್ದು, ಸದರಿ ನೋಟಿಸ್ ದಿನಾಂಕಃ 03.06.2022 ರಂದು ಆರೋಪಿತನಿಗೆ ಖುದ್ದು ಜಾರಿಯಾಗಿರುತ್ತದೆ. ಆದರೆ, ಹಣವನ್ನು ಪಾವತಿಸಿರುವುದಿಲ್ಲ. ಆದ್ದರಿಂದ, ಆರೋಪಿತನ ವಿರುದ್ದ ಲಿಖಿತ ವರ್ಗಾವಣೆಗಳ ಅಧಿನಿಯಮ ಕಲಂ 138 ಖಾಸಗಿ ಪಿರ್ಯಾದನ್ನು ಸಲ್ಲಿಸಿರುತ್ತಾರೆ.

8. ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 104 ಮತ್ತು 106ರಂತೆ ಪಿರ್ಯಾದಿಯು ತಾನು ನಿರೂಪಿಸಿದ ಸಂಗತಿಗಳನ್ನು ರುಜುವಾತು ಪಡಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತಾನೆ. ಸದರಿ ಸಂಗತಿಗಳನ್ನು ರುಜುವಾತು ಪಡಿಸುವ ನಿಟ್ಟಿನಲ್ಲಿ, ಪಿರ್ಯಾದಿಯು ತನ್ನನ್ನು ತಾನು ಪ್ರಾಸ-1 ಎಂದು ವಿಚಾರಣೆಗೊಳಪಡಿಸಿಕೊಂಡು, ತನ್ನ ಮುಖ್ಯ ವಿಚಾರಣೆ ಸಾಕ್ಷ್ಯದ ಸಮರ್ಥನೆಗಾಗಿ ನಿಪಿ-1 ರಿಂದ 6 ದಾಖಲಾತಿಗಳನ್ನು ನಿಶಾನಿಸಿಕೊಂಡಿರುತ್ತಾರೆ. ಸದರಿ ದಾಖಲಾತಿಗಳನ್ನು ಪರಿಶೀಲಿಸಲಾಗಿ ನಿಪಿ-1 ದಾಖಲಾತಿಯು ದಿನಾಂಕಃ16.05.2022ರಂದು ರೂ.9,50,000/- ಎಂದು ನಮೂದಾಗಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹನೂರು ಶಾಖೆ, ಚೆಕ್ ಸಂಖ್ಯೆ 103938 ಆಗಿರುತ್ತದೆ, ನಿಪಿ-2 ದಾಖಲಾತಿಯು ದಿನಾಂಕ 23.05.2022 ರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕಾಮಗೆರೆ ಶಾಖೆಯವರು ನೀಡಿದ ಹಿಂಬರಹವಾಗಿರುತ್ತದೆ, ನಿಪಿ-3 ದಿನಾಂಕ 28.05.2022 ರ ನೋಟಿಸಿನ ಕಚೇರಿ ಪ್ರತಿ, ನಿಪಿ-4 ಅಂಚೆ ರಶೀದಿ, ನಿಪಿ-5 ಅಂಚೆ ಸ್ವೀಕೃತಿ ಮತ್ತು ನಿಪಿ-6 ಪ್ರತ್ಯುತ್ತರ ಪತ್ರವಾಗಿರುತ್ತದೆ.

9. ಪಿರ್ಯಾದಿಯು ನ್ಯಾಯಾಲಯದ ಸಮಕ್ಷಮ ಇರುವ ದಾಖಲಾತಿಗಳನ್ನು ಕೂಲಂಕುಶವಾಗಿ ಪರಿಶೀಲನೆ ಮಾಡಿ ನೋಡಲಾಗಿ, ನಿಪಿ-1 ಚೆಕ್ ದಿನಾಂಕ 16.05.2022 ರದ್ದಾಗಿರುತ್ತದೆ. ಸದರಿ ಚೆಕ್ಕನ್ನು ಪಿರ್ಯಾದಿಯು ನಗದೀಕರಣಕ್ಕಾಗಿ ಬ್ಯಾಂಕಿಗೆ ಹಾಜರುಪಡಿಸಿದಾಗ, **"Funds Insufficient"** ಎಂಬ ಹಿಂಬರಹದೊಂದಿಗೆ ದಿನಾಂಕ 23.05.2022 ರಂದು ಚೆಕ್ ಅಮಾನ್ಯಗೊಂಡಿರುತ್ತದೆ. ಅದರಂತೆ, ಪಿರ್ಯಾದಿಯು ನಿಗದಿತ ಕಾಲದಲ್ಲಿ, ಚೆಕ್ಕನ್ನು ನಗದೀಕರಣಕ್ಕಾಗಿ ಸಲ್ಲಿಸಿರುವುದು ಕಂಡು ಬರುತ್ತಿದೆ. ಮುಂದುವರೆದು, ಪಿರ್ಯಾದಿಯು ಬ್ಯಾಂಕಿನಿಂದ ಹಿಂಬರಹವನ್ನು ಪಡೆದ ನಂತರ ದಿನಾಂಕ 28.05.2022 ರಂದು ಪಿರ್ಯಾದಿಯು, ಚೆಕ್ ಅಮಾನ್ಯಗೊಂಡಿದ್ದು, ಹದಿನೈದು ದಿನಗಳ ಒಳಗಾಗಿ ಸಾಲದ ಹಣವನ್ನು ಮರುಪಾವತಿ ಮಾಡುವಂತೆ ಕೋರಿ ನೋಟಿಸ್ ನೀಡಿದ್ದು, ದಿನಾಂಕಃ 03.06.2022 ರಂದು ಆರೋಪಿತನು ಸದರಿ ನೋಟಿಸ್ ಪಡೆದುಕೊಂಡಿರುತ್ತಾರೆ. ಆ ನಂತರ ದಿನಾಂಕಃ 06.07.2022 ರಂದು ದೂರನ್ನು ದಾಖಲು ಮಾಡಿರುತ್ತಾರೆ. ಲಿಖಿತ ವರ್ಗಾವಣೆಯ ಅಧಿನಿಯಮದ ಕಲಂ 142 ರಂತೆ ನೋಟಿಸ್ಸ್ ಜಾರಿಯಾದ 15 ದಿನಗಳ ನಂತರ, 30 ದಿನಗಳ ಒಳಗಾಗಿ, ಪ್ರಕರಣವನ್ನು ದಾಖಲು ಮಾಡಬೇಕಾಗಿರುತ್ತದೆ. ಅದರಂತೆ, ಪಿರ್ಯಾದಿಯು ಲಿಖಿತ ವರ್ಗಾವಣೆಗಳ ಅಧಿನಿಯಮದ ಕಲಂ 138ರಲ್ಲಿನ ಘಟಕಾಂಶಗಳನ್ನು ಪೂರೈಸಿರುತ್ತಾರೆ.

10. ಮುಂದುವರೆದು, ಪಿರ್ಯಾದಿಯು ಲಿಖಿತ ವರ್ಗಾವಣೀಯ ಅಧಿನಿಯಮದ ಕಲಂ 138ರಲ್ಲಿನ ಘಟಕಾಂಶಗಳನ್ನು ಪೂರೈಸಿದ್ದೇ ಆದಲ್ಲಿ, ಸದರಿ ಅಧಿನಿಯಮದ ಕಲಂ 139ರಲ್ಲಿ ತಿಳಿಸಿರುವಂತೆ ಅಂದರೆ, ಆರೋಪಿತನು ಅನ್ಯತಾ ಸಾಭೀತು ಪಡಿಸದ ಹೊರತು ಚೆಕ್ ನ ಧಾರಕನು ಸದರಿ ಚೆಕ್ಕನ್ನು ಸಾಲ ಅಥವಾ ಇನ್ನಿತರ ಹೊಣೆಗಾರಿಕೆಯ ಸಂಪೂರ್ಣ ಅಥವಾ ಭಾಗಶಃ ಪಾವತಿಗಾಗಿಯೇ ಪಡೆದಿದ್ದಾನೆಂದು ಪೂರ್ವಭಾವಿಸಬಹುದಾಗಿರುತ್ತದೆ. ಆದರೆ, ಆರೋಪಿತನು ಸದರಿ ಪೂರ್ವಭಾವನೆಯನ್ನು ಸುಸಂಬದ್ಧ ಸಾಕ್ಷ್ಯಾಧಾರಗಳ ಮೂಲಕ ಅನ್ಯಥಾ ಖಂಡಿಸ ಬಹುದಾಗಿರುತ್ತದೆ. ಅದರಂತೆ, ಸದರಿ ಪೂರ್ವಭಾವನೆಯು ಖಂಡಿಸಬಹುದಾಂತಹ ಪೂರ್ವಭಾವನೆಯಾಗಿರುತ್ತದೆ. ಮುಂದುವರೆದು, ಮಾನ್ಯ ಸರ್ವೋಚ್ಚ ನ್ಯಾಯಾಲಯವು

**Rangappa Vs. Mohan (2010(1) DCR 706)** ಪ್ರಕರಣದಲ್ಲಿ, **"The Statutory presumption**

**mandated by sec.139 of the Act, does indeed include the existence of a legally enforceable debt or liability. However, the presumption U/S 139 of the Act is in the nature of a rebuttable presumption and it is open for the accused to raise a defence wherein the existence of a legally enforceable debt or liability can be contested"**

ಎಂಬುದಾಗಿರುತ್ತದೆ. ಅದರಂತೆ, ಪಿರ್ಯಾದಿಯು ಕಲಂ 138 ರಡಿಯಲ್ಲಿನ ಘಟಕಾಂಶವನ್ನು ಪೂರೈಸಿದ ನಂತರ ಮತ್ತು ಕಲಂ 118 ಮತ್ತು ಕಲಂ 139ರಡಿಯಲ್ಲಿ ಪೂರ್ವಭಾವನೆಯನ್ನು ತೆಗೆದುಕೊಳ್ಳಬಹುದಾಗಿರುತ್ತದೆ. ಸದರಿ ಪೂರ್ವ ಭಾವನೆಯು ಖಂಡಿಸಬಹುದಾದಂತಹ ಪೂರ್ವ ಭಾವನೆಯಾಗಿದ್ದು, ಆರೋಪಿಯು ಸದರಿ ದಾಖಲಾತಿಯನ್ನು ಕಾನೂನುಬದ್ದವಾಗಿ ಮರುಪಾವತಿಸುವಂತಹ ಮೊತ್ತಕ್ಕೆ ನೀಡಿರುವುದಿಲ್ಲ ಎಂಬುದಾಗಿ ತನ್ನ ಪ್ರತಿರಕ್ಷಣೆಯನ್ನು ತೆಗೆದುಕೊಳ್ಳಬಹುದಾಗಿರುತ್ತದೆ. ಸದರಿ ಪೂರ್ವಭಾವನೆಯನ್ನು ಆರೋಪಿತನು ತಾನು ನ್ಯಾಯಾಲಯದಲ್ಲಿ ತನ್ನನ್ನು ತಾನು ಸಾಕ್ಷಿ ವಿಚಾರಣೆಗೊಳಪಡಿಸಿಕೊಂಡು ಅಥವಾ ಬೇರೆ ಸಾಕ್ಷಿಗಳನ್ನು ಹಾಜರುಪಡಿಸಿ ಖಂಡಿಸಬೇಕಾದ ಅವಶ್ಯಕತೆ ಇರುವುದಿಲ್ಲ. ಬದಲಾಗಿ ಪಿರ್ಯಾದಿಯನ್ನು ಪಾಟೀ ಸವಾಲಿಗೊಳಪಡಿಸಿಯೇ ಖಂಡಿಸಬಹುದಾಗಿರುತ್ತದೆ. ಆದರೆ, ಈ ಪ್ರಕರಣದಲ್ಲಿ ನ್ಯಾಯಾಲಯವು ಆರೋಪಿತನಿಗೆ ಸಾಕಷ್ಟು ಕಾಲವಕಾಶ ನೀಡಿದ ನಂತರವೂ ಸಹ ಪ್ರಾಸ-1 ರವರನ್ನು ಪಾಟಿ ಸವಾಲಿಗೆ ಒಳಪಡಿಸಿಕೊಂಡಿರುವುದಿಲ್ಲ. ಈ ಪ್ರಕರಣದಲ್ಲಿ ಆರೋಪಿತನು ನ್ಯಾಯಾಲಯದ ಸಮಕ್ಷಮ ಹಾಜರಾಗಿ ತನ್ನ ವಿಚಾರಣೆಯ ಹಂತದಲ್ಲಿ ಪ್ರಾಸಾ-1 ರವನ್ನು ವಿಚಾರಣೆಗೆ ಒಳಪಡಿಸಿಕೊಳ್ಳಲು ಅವಕಾಶ ಕೋರಿದ್ದು, ಆರೋಪಿಯು ಸಲ್ಲಿಸಿದ್ದ ಅರ್ಜಿಯನ್ನು ಪುರಸ್ಕರಿಸಿ ಪಾಟೀ ಸವಾಲಿಗೆ ಕಾಲವಕಾಶ ನೀಡಲಾಗಿರುತ್ತದೆ. ಆ ನಂತರವೂ ಸಹ ಆರೋಪಿಯು ನ್ಯಾಯಾಲಯದ ಸಮಕ್ಷಮ ಹಾಜರಾಗಿ ಪ್ರಾಸಾ-1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿಕೊಂಡಿರುವುದಿಲ್ಲ.

11. ಈ ಪ್ರಕರಣದಲ್ಲಿ ಆರೋಪಿಯು ನಿಪಿ-3 ನೋಟಿಸಿಗೆ ಪ್ರತ್ಯುತ್ತರ ನೀಡಿದ್ದು ಸದರಿ ಪ್ರತ್ಯುತ್ತರದಲ್ಲಿ ಆರೋಪಿ ಮತ್ತು ಪಿರ್ಯಾದಿಯ ನಡುವೆ ದಿನಾಂಕಃ 29.05.2020 ರಂದು ಹನೂರು ಪಟ್ಟಣದ ಆರ್. ಎಸ್. ದೊಡ್ಡಿ ಬಡಾವಣೆಯ ವಾರ್ಡ್ ನಂ. 13 ರಲ್ಲಿರುವ ಸ್ವತ್ತಿನ ಸಂಖ್ಯೆಃ 25-4-155ರ ಸ್ವತ್ತನ್ನು ಪಿರ್ಯಾದುದಾರರಿಗೆ ಹಾಗೂ ನಾಗರಾಜುರವರಿಗೆ ಶುದ್ಧ ಕ್ರಯ ಮಾಡಿಕೊಟ್ಟಿರುವುದಾಗಿ, ಪಿರ್ಯಾದಿಯು ಸದರಿ ಸ್ವತ್ತು ಬೇಡ ಎಂದು ಹಣವನ್ನು ಹಿಂದಿರುಗಿಸುವಂತೆ ಊರಿನ ಮುಖಂಡರ ಸಮ್ಮುಖದಲ್ಲಿ ನ್ಯಾಯಾ ಪಂಚಾಯಿತಿ ಮಾಡಿಸಿದ್ದು ದಿನಾಂಕಃ 03.11.2020 ರಂದು ಆ ಬಗ್ಗೆ ಒಪ್ಪಿ ಪತ್ರವನ್ನು ಬರೆದು ಕೊಟ್ಟಿದ್ದು ಅದೇ ದಿನ ರೂ. 12,00,000/- ಗಳನ್ನು ಪಾವತಿಸಿದ್ದು ಉಳಿಕೆ ರೂ. 3,00,000/- ಗಳನ್ನು ದಿನಾಂಕಃ 03.12.2020 ರಂದು ಪಾವತಿ ಮಾಡುವುದಾಗಿ ತಿಳಿಸಿ ಆ ಹಣದ ಭದ್ರತೆಗಾಗಿ ನಿಪಿ-1 ಚೆಕ್ಕನ್ನು ಕೊಡಲಾಗಿತ್ತು ಎಂಬುದಾಗಿ ತಿಳಿಸಿರುತ್ತಾರೆ. ಅದರಂತೆ ನಿಪಿ-1 ಚೆಕ್ಕನ್ನು ಪಿರ್ಯಾದಿಯಿಂದ ಪಡೆದ ಸಾಲದ ಮರು ಪಾವತಿಗೆ ಅಲ್ಲದೇ ಕ್ರಯದ ಕರಾರು ಆಗಿದ್ದು ಆ ಸದರಿ ಕ್ರಯದ ಕರಾರು ರದ್ದುಗೊಳಿಸಲ್ಪಟ್ಟಿದ್ದು, ಅದರ ಮರು ಪಾವತಿಯ ಬಾಕಿ ಹಣಕ್ಕಾಗಿ ನಿಪಿ-1 ಚೆಕ್ಕನ್ನು ಕೊಡಲಾಗಿತ್ತು ಎಂಬುದಾಗಿ ನಿಪಿ-6 ರಂತೆ ತಮ್ಮ ಪ್ರತ್ಯುತ್ತರ ನೀಡುವ ಮೂಲಕ ತಮ್ಮ ಪ್ರತಿರಕ್ಷಣೆಯನ್ನು ನಿಗದಿ ಪಡಿಸಿಕೊಂಡಿರುತ್ತಾರೆ. ಆದರೆ ಆರೋಪಿಯು ಆ ನಿಟ್ಟಿನಲ್ಲಿ ಪಿರ್ಯಾದುದಾರರನ್ನು ಪಾಟೀ ಸವಾಲಿಗೆ ಒಳಪಡಿಸಿರುವುದಿಲ್ಲ. ಈ ನ್ಯಾಯಾಲಯದ ಆರೋಪಿಗೆ ಪಿರ್ಯಾದುದಾರರನ್ನು ಪಾಟೀ ಸವಾಲಿಗೆ ಒಳಪಡಿಸಲು ಸಾಕಷ್ಟು ಅವಕಾಶಗಳನ್ನು ಕೊಟ್ಟಿದ್ದರೂ ಸಹ ಪಾಟೀ ಸವಾಲಿಗೆ ಒಳಪಡಿಸಿರುವುದಿಲ್ಲ. ಆದ್ದರಿಂದ ಪಿರ್ಯಾದಿ ತಮ್ಮ ಪಿರ್ಯಾದಿನಲ್ಲಿ ತಿಳಿಸಿರುವ ಸಂಗತಿಗಳನ್ನು ಖಂಡಿಸುವಂತಹ ಯಾವುದೇ ಸಂಗತಿಗಳು ನ್ಯಾಯಾಲಯದ ಸಮಕ್ಷಮ ಕಂಡುಬಂದಿರುವುದಿಲ್ಲ.

12. ಮುಂದುವರೆದು, ಆರೋಪಿತನು ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಹೇಳಿಕೆಯನ್ನು ದಾಖಲು ಮಾಡುವ ಸಮಯದಲ್ಲಿ ತಮ್ಮ ಪರ ವಿಚಾರಣೆ ಇದೆ ಎಂಬುದಾಗಿ ತಿಳಿಸಿರುತ್ತಾರೆ ಹೊರತು ಯಾವುದೇ ಸಾಕ್ಷ್ಯ ವಿಚಾರಣೆ ಮಾಡಿರುವುದಿಲ್ಲ. ಈ ಪ್ರಕರಣದಲ್ಲಿ ಪ್ರಾಸಾ.1 ರವರು ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿರುವ ಸಾಕ್ಷಾಧಾರಗಳನ್ನು ಪರಿಶೀಲಿಸಲಾಗಿ, ಪಿರ್ಯಾದಿದಾರರು ನಿರೂಪಿಸಿರುವ ಸಂಗತಿಯನ್ನು ಸಂಶಯಿಸುವಂತಹ ಮತ್ತು ಖಂಡಿಸುವಂತಹ ಯಾವುದೇ ಸಂಗತಿಗಳು ಕಂಡು

ಬಂದಿರುವುದಿಲ್ಲ. ಹಾಗಾಗಿ ಆರೋಪಿತನು ಪಿರ್ಯಾದಿಯಿಂದ ರೂ.9,50,000/- ಗಳ ಕಾನೂನು ಬದ್ದ ಮೊತ್ತವನ್ನು ಮರುಪಾವತಿಸುವ ನಿಟ್ಟಿನಲ್ಲಿ ನಿಪಿ-1 ಚೆಕ್ಕ್ ನ್ನು ಕೊಟ್ಟಿದ್ದರು ಎಂಬುದು ರುಜುವಾತಾಗಿರುತ್ತದೆ.

13. ಪಿರ್ಯಾದಿಯು ಈ ಪ್ರಕರಣದಲ್ಲಿ ಲಿಖಿತ ವರ್ಗಾವಣೆಗಳ ಅಧಿನಿಯಮದ ಕಲಂ 138ರಡಿಯಲ್ಲಿನ ಘಟಕಾಂಶಗಳನ್ನು ಪೂರೈಸಿರುತ್ತಾರೆ. ಅದರಂತೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು **ರಂಗಪ್ಪ ವಿರುದ್ಧ ಮೋಹನ್** ಪ್ರಕರಣದಲ್ಲಿ ಪಿರ್ಯಾದಿಯು ಲಿಖಿತ ವರ್ಗಾವಣೆಗಳ ಅಧಿನಿಯಮ ಕಲಂ 138 ರಡಿಯಲ್ಲಿನ ಘಟಕಾಂಶಗಳನ್ನು ಪೂರೈಸಿದ್ದು, ಸದರಿ ಘಟಕಾಂಶಗಳನ್ನು ಪೂರೈಸಿದ ನಂತರ ಲಿಖಿತ ವರ್ಗಾವಣೆಗಳ ಅಧಿನಿಯಮ ಕಲಂ 139ರಡಿಯಲ್ಲಿ ಪೂರ್ವ ಭಾವನೆ ತೆಗೆದುಕೊಳ್ಳಬಹುದಾಗಿರುತ್ತದೆ. ಹಾಗೂ ಸದರಿ ಪೂರ್ವ ಭಾವನೆಯನ್ನು ಆರೋಪಿತನು ಖಂಡಿಸದೇ ಇದ್ದ ಪಕ್ಷದಲ್ಲಿ ಪಿರ್ಯಾದಿಯು ಸದರಿ ಪಿರ್ಯಾದಿನಲ್ಲಿರುವ ಸಂಗತಿಗಳನ್ನು ರುಜುವಾತು ಪಡಿಸಿರುತ್ತಾರೆ ಎಂಬುದಾಗಿರುತ್ತದೆ. ಅದರಂತೆ, ಈ ಪ್ರಕರಣದಲ್ಲಿಯೂ ಸಹ ಪಿರ್ಯಾದಿಯು ಲಿಖಿತ ವರ್ಗಾವಣೆಗಳ ಅಧಿನಿಯಮದ ಕಲಂ 138ರಡಿಯಲ್ಲಿನ ಘಟಕಾಂಶಗಳನ್ನು ಪೂರೈಸಿರುತ್ತಾರೆ. ಹಾಗೂ ಸದರಿ ಅಧಿನಿಯಮದ ಕಲಂ 118 ಮತ್ತು 139ರಡಿಯಲ್ಲಿನ ಪೂರ್ವ ಭಾವನೆಯನ್ನು ತೆಗೆದುಕೊಳ್ಳಲಾಗಿರುತ್ತದೆ. ಸದರಿ ಪೂರ್ವಭಾವನೆಯನ್ನು ಖಂಡಿಸುವಂತಹ ಯಾವುದೇ ಸಾಕ್ಷ್ಯಧಾರಗಳು ಲಭ್ಯವಿರುವುದಿಲ್ಲ. ಆದ್ದರಿಂದ, ಈ ಮೇಲ್ಕಂಡಂತೆ ಚರ್ಚಿಸಿದ ಎಲ್ಲಾ ಕಾರಣಗಳಿಗಾಗಿ ಅಂಶ-1ನ್ನು **ಸಕರಾತ್ಮಕವಾಗಿ** ಉತ್ತರಿಸಲಾಗಿದೆ.

14. **ಅಂಶ-2** :- ಈ ಮೇಲ್ಕಂಡಂತೆ ಚರ್ಚಿಸಿದ ಕಾರಣಗಳಿಗಾಗಿ ಅಂಶ-1ನ್ನು ಸಕರಾತ್ಮಕವಾಗಿ ಉತ್ತರಿಸುತ್ತಾ, ಈ ಕೆಳಕಂಡಂತೆ ಮಾಡಲಾಗುವ ಆದೇಶ:-

-: **ಆದೇಶ** :-

ದಂಡ ಪ್ರಕ್ರಿಯಾ ಸಂಹಿತೆ ಕಲಂ 255(2) ರಡಿಯಲ್ಲಿ ನೀಡಿರುವ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಆರೋಪಿಯ ವಿರುದ್ದ ವರ್ಗಾವಣೀಯ ಲಿಖಿತ ಕಾಯ್ದೆ ಕಲಂ 138 ರಡಿಯಲ್ಲಿ ಮಾಡಿರುವ ಅಪರಾಧಕ್ಕಾಗಿ ಅಪರಾಧಿಯೆಂದು ನ್ಯಾಯಾಲಯವು ಆದೇಶಿಸಿದೆ.

ಆರೋಪಿಯು ಜುಲ್ಮಾನೆ ಹಣವಾದ ರೂ.9,70,000/-ಗಳನ್ನು ಪಾವತಿಸಲು ಆದೇಶಿಸಲಾಗಿದೆ. ಒಂದು ವೇಳೆ ಆರೋಪಿಯು ಸದರಿ ಜುಲ್ಮಾನೆ ಹಣವನ್ನು ಪಾವತಿಸಲು ವಿಫಲವಾದರೆ 6 ತಿಂಗಳ ಸಾಮಾನ್ಯ ಕಾರಾಗೃಹವಾಸದ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ ಎಂದು ಈ ಮೂಲಕ ಆದೇಶಿಸಿದೆ.

ಮುಂದುವರೆದು ಪಿರ್ಯಾದಿಗೆ ಜುಲ್ಮಾನೆ ಹಣದಲ್ಲಿ ರೂ.9,60,000/-ಗಳನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 357 ರಡಿಯಲ್ಲಿ ಪರಿಹಾರವಾಗಿ ಪಡೆಯಲು ಅರ್ಹರು ಎಂದು ಆದೇಶಿಸುತ್ತಾ ಮತ್ತು ಉಳಿದ ರೂ. 10,000/- ಜುಲ್ಮಾನೆ ಹಣವನ್ನು ರಾಜ್ಯ ಸರ್ಕಾರಕ್ಕೆ ಪಾವತಿಸಲು ಆದೇಶಿಸಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 421(1) ರ ಪರಂತುವಿನಲ್ಲಿ ತಿಳಿಸಿರುವಂತೆ ದಂಡ ಪಾವತಿಸುವ ಬದಲು ಕಾರಾಗೃಹ ವಾಸವನ್ನು ಆರೋಪಿತನು ಅನುಭವಿಸಿದರೂ ಸಹ ದಂಡ ತೆರುವ ಬಾಧ್ಯತೆಯಿಂದ ಆರೋಪಿತನು ಮುಕ್ತನಾಗುವುದಿಲ್ಲವೆಂದು ಈ ಮೂಲಕ ಸ್ಪಷ್ಟಿಕರಿಸಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 363 ರಡಿಯಲ್ಲಿ ಆರೋಪಿಗೆ ತೀರ್ಪಿನ ದೃಢೀಕೃತ ಪ್ರತಿಯನ್ನು ಉಚಿತವಾಗಿ ನೀಡುವಂತೆ ಕಛೇರಿಗೆ ಆದೇಶಿಸಲಾಗಿದೆ.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಅವರು ಗಣಕೀಕೃತಗೊಳಿಸಿದ ತರ್ಜುಮೆಯನ್ನು ತಿದ್ದಿ ಸಹಿ ಮಾಡಿ ದಿನಾಂಕಃ30.06.2026 ರಂದು ತೆರೆದ ನ್ಯಾಯಾಲಯದಲ್ಲಿ ನಾನು ಉದ್ಘೋಷಿಸಿರುತ್ತೇನೆ.)

**(ಕಾವ್ಯಶ್ರೀ ಎಂ)**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.

**ಅನುಬಂಧ**

ಅ) **ಪಿರ್ಯಾದಿದಾರರ ಪರ ವಿಚಾರಣೆ ಮಾಡಿರುವ ಸಾಕ್ಷಿಗಳು :**

| | | |
|---|---|---|
| ಪ್ರಾಸಾ-1 | : | ಸಿದ್ದಯ್ಯ |

ಆ) **ಪಿರ್ಯಾದಿದಾರರ ಪರ ಗುರುತಿಸಿಕೊಂಡಿರುವ ದಾಖಲೆಗಳು** :

| | | |
|---|---|---|
| ನಿಪಿ-1 | : | ಒಂದು ಚೆಕ್ |
| ನಿಪಿ-1 (ಎ) | : | ಸಹಿ |
| ನಿಪಿ-2 | : | ಹಿಂಬರಹ |

| | | |
|---|---|---|
| ನಿಪಿ-3 | : | ಕಾನೂನು ತಿಳುವಳಿಕೆ ನೋಟಿಸ್ |
| ನಿಪಿ-4 | : | ಅಂಚೆ ರಶೀದಿ |
| ನಿಪಿ-5 | : | ಅಂಚೆ ಸ್ವೀಕೃತಿ |
| ನಿಪಿ-6 | : | ಪ್ರತ್ಯುತ್ತರ ಪತ್ರ |

ಇ) **ಆರೋಪಿಯ ಪರ ವಿಚಾರಣೆ ಮಾಡಿರುವ ಸಾಕ್ಷಿಗಳು :**

-ಇಲ್ಲ -

ಈ) **ಆರೋಪಿಯ ಪರ ಗುರುತಿಸಿಕೊಂಡಿರುವ ದಾಖಲೆಗಳು :**

-ಇಲ್ಲ -

**(ಕಾವ್ಯಶ್ರೀ ಎಂ)**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.

Visit **ecourts.gov.in** for updates or download mobile app "**eCourts Services**" from Android or iOS

ಕಡತವನ್ನು ತೆರೆದ ನ್ಯಾಯಾಲಯದಲ್ಲಿ ಕರೆಯಲಾಯಿತು. ಆರೋಪಿ ಮತ್ತು ಆರೋಪಿ ಪರ ವಕೀಲರು ನ್ಯಾಯಾಲಯದ ಸಮಕ್ಷಮ ಗೈರು ಹಾಜರಿರುತ್ತಾರೆ.

ನ್ಯಾಯಾಲಯದ ಸಮಕ್ಷಮ ಇರುವ ದಾಖಲಾತಿಯನ್ನು ಪರಿಶೀಲಿಸಿದ ನಂತರ, ಈ ನ್ಯಾಯಾಲಯವು ಕಡತವನ್ನು ತೀರ್ಪಿಗಾಗಿ ಕಾಯ್ದಿರಿಸಿರುವುದು, ಆರೋಪಿತನ ತಿಳುವಳಿಕೆ ಇರುವ ಸಂಗತಿಯಾಗಿರುತ್ತದೆ. ಆದರೆ, ಆರೋಪಿತನು ಈ ದಿನ ನ್ಯಾಯಾಲಯದ ಸಮಕ್ಷಮ ಗೈರು ಹಾಜರಿರುತ್ತಾರೆ. ಈ ಪ್ರಕರಣದ ವಿಲೆಯಲ್ಲಿ ಆಗುವ ವಿಳಂಬವನ್ನು ತಪ್ಪಿಸುವ ಸಲುವಾಗಿ ಹಾಗೂ ಈ ನ್ಯಾಯಾಲಯವು ಅಪರಾಧಿಕ ಸಂಹಿತೆ ಕಲಂ 353(6)ರಡಿಯಲ್ಲಿನ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತ ಈ ಕೆಳಕಂಡಂತೆ, ಆರೋಪಿತನ ಗೈರು ಹಾಜರಿಯಲ್ಲಿ ತೀರ್ಪನ್ನು ಉಚ್ಚರಿಸಲಾಗಿದೆ.

**(ಕಾವ್ಯಶ್ರೀ ಎಂ)**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.

**(ಆದೇಶವನ್ನು ತೆರೆದ ನ್ಯಾಯಾಯಾಲಯದಲ್ಲಿ ಘೋಷಿಸಲಾಯಿತು )**

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ 255(2) ರಡಿಯಲ್ಲಿ ನೀಡಿರುವ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಆರೋಪಿಯ ವಿರುದ್ಧ ವರ್ಗಾವಣೀಯ ಲಿಖಿತ ಕಾಯ್ದೆ ಕಲಂ 138 ರಡಿಯಲ್ಲಿ ಮಾಡಿರುವ ಅಪರಾಧಕ್ಕಾಗಿ ಅಪರಾಧಿಯೆಂದು ನ್ಯಾಯಾಲಯವು ಆದೇಶಿಸಿದೆ.

ಆರೋಪಿಯು ಜುಲ್ಮಾನೆ ಹಣವಾದ ರೂ.9,70,000/-ಗಳನ್ನು ಪಾವತಿಸಲು ಆದೇಶಿಸಲಾಗಿದೆ. ಒಂದು ವೇಳೆ ಆರೋಪಿಯು ಸದರಿ ಜುಲ್ಮಾನೆ ಹಣವನ್ನು ಪಾವತಿಸಲು ವಿಫಲವಾದರೆ 6 ತಿಂಗಳ ಸಾಮಾನ್ಯ ಕಾರಾಗೃಹವಾಸದ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ ಎಂದು ಈ ಮೂಲಕ ಆದೇಶಿಸಿದೆ.

ಮುಂದುವರೆದು ಪಿರ್ಯಾದಿಗೆ ಜುಲ್ಮಾನೆ ಹಣದಲ್ಲಿ ರೂ.9,60,000/-ಗಳನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 357 ರಡಿಯಲ್ಲಿ ಪರಿಹಾರವಾಗಿ ಪಡೆಯಲು ಅರ್ಹರು ಎಂದು ಆದೇಶಿಸುತ್ತಾ ಮತ್ತು ಉಳಿದ ರೂ. 10,000/- ಜುಲ್ಮಾನೆ ಹಣವನ್ನು ರಾಜ್ಯ ಸರ್ಕಾರಕ್ಕೆ ಪಾವತಿಸಲು ಆದೇಶಿಸಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 421(1) ರ ಪರಂತುವಿನಲ್ಲಿ ತಿಳಿಸಿರುವಂತೆ ದಂಡ ಪಾವತಿಸುವ ಬದಲು ಕಾರಾಗೃಹ ವಾಸವನ್ನು ಆರೋಪಿತನು ಅನುಭವಿಸಿದರೂ ಸಹ ದಂಡ ತೆರುವ ಬಾಧ್ಯತೆಯಿಂದ ಆರೋಪಿತನು ಮುಕ್ತನಾಗುವುದಿಲ್ಲವೆಂದು ಈ ಮೂಲಕ ಸ್ಪಷ್ಟಿಕರಿಸಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 363 ರಡಿಯಲ್ಲಿ ಆರೋಪಿಗೆ ತೀರ್ಪಿನ ದೃಢೀಕೃತ ಪ್ರತಿಯನ್ನು ಉಚಿತವಾಗಿ ನೀಡುವಂತೆ ಕಛೇರಿಗೆ ಆದೇಶಿಸಲಾಗಿದೆ.

**(ಕಾವ್ಯಶ್ರೀ ಎಂ)**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.